154 ನಿ 6 ನಿ-330 = 74
4/RL
12/08

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಡಾ: ತಳವಾರ್ ಸಾಬಣ್ಣ ಇವರ ನಿಯಮ 330ರಡಿ ಸೂಚನೆಗೆ ಉತ್ತರ**

**ವಿಷಯ:** ಕಲಬುರಗಿ ಜಿಲ್ಲೆಯ ಬೆಣ್ಣೆತೋರಾ, ಮುಲ್ಲಾಮಾರಿ ಮತ್ತು ಅಮರ್ಜಾದಂತಹ ಮಧ್ಯಮ ನೀರಾವರಿ ಯೋಜನೆಗಳಿಂದ ರೈತರಿಗೆ ಉಪಯೋಗವಾಗದೇ ಹಣ ವ್ಯಯವಾಗಿರುವುದು ಮತ್ತು ಕಾಮಗಾರಿಗಳಿಂದ ಉದ್ಭವಿಸಿದ ಸಮಸ್ಯೆಗಳು ಮತ್ತು ಭೀಮಾ ನದಿಗೆ ಮಹಾರಾಷ್ಟ್ರದಿಂದ ನೀರು ಬಿಡುಗಡೆ ಮತ್ತು ದುರುಪಯೋಗ ಕುರಿತು ಪ್ರಸ್ತಾಪಿಸಿರುವ ಬಗ್ಗೆ.

*****

ಕಲಬುರಗಿ ಜಿಲ್ಲೆಯಲ್ಲಿ ನೀರಾವರಿಗೆ ನೀರೊದಗಿಸುವ ಹಾಗೂ ಜನಜಾನುವಾರುಗಳಿಗೆ ಕುಡಿಯುವ ನೀರಿನ ಬವಣೆ ನೀಗಿಸುವ ಉದ್ದೇಶದಿಂದ ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣದ ವರದಿಯನ್ವಯ ರಾಜ್ಯಕ್ಕೆ ಹಂಚಿಕೆಯಾಗಿರುವ ನೀರಿನ ಪ್ರಮಾಣಕ್ಕನುಗುಣವಾಗಿ ಈ ಕೆಳಕಂಡ ಯೋಜನೆಗಳನ್ನು ರೂಪಿಸಲಾಗಿರುತ್ತದೆ:

1. **ಬೆಣ್ಣೆತೋರಾ ಯೋಜನೆ:-** ಬೆಣ್ಣೆತೋರಾ ಯೋಜನೆಯ ಆಣೆಕಟ್ಟು ಕಲಬುರ್ಗಿ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನ ಹೆರೂರ ಗ್ರಾಮದ ಬೆಣ್ಣೆತೋರಾ ನದಿಗೆ ಅಡ್ಡಲಾಗಿ ಕಟ್ಟಲಾಗಿದೆ. ಸದರಿ ಯೋಜನೆಯಿಂದ ಕಲಬುರಗಿ ಜಿಲ್ಲೆಯ ಕಾಳಗಿ, ಚಿತ್ತಾಪೂರ ಮತ್ತು ಸೇಡಂ ತಾಲ್ಲೂಕಿನ ಒಟ್ಟು 20,234 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಸದರಿ ಯೋಜನೆಯು ಪೂರ್ಣಗೊಂಡು ಹಲವಾರು ವರ್ಷಗಳಾಗಿರುವುದರಿಂದ ಕಾಲುವೆ ಜಾಲಗಳು ಶಿಥಿಲಗೊಂಡಿರುವ ಹಿನ್ನಲೆಯಲ್ಲಿ ಸದರಿ ಯೋಜನೆಯ ಕೊನೆ ಭಾಗದ ರೈತರಿಗೆ ಸಮರ್ಪಕವಾಗಿ ನೀರನ್ನು ಹರಿಸಲು ಯೋಜನೆಯ ಕಾಲುವೆ ಜಾಲಗಳ ಆಧುನೀಕರಣ ಕಾಮಗಾರಿಯನ್ನು ಈಗಾಗಲೇ ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿರುತ್ತದೆ.

2. **ಕೆಳದಂಡೆ ಮುಲ್ಲಾಮಾರಿ ಯೋಜನೆ:-** ಕೃಷ್ಣಾ ಕೊಳ್ಳದ ಕಾಗಿಣಾ ನದಿಯ ಉಪ ನದಿಯಾದ ಮುಲ್ಲಾಮಾರಿ ನದಿಗೆ ಅಡ್ಡಲಾಗಿ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಚಿಂಚೋಳಿ ತಾಲ್ಲೂಕಿನ ನಾಗರಾಳ ಗ್ರಾಮದ ಬಳಿಯಲ್ಲಿದ್ದು, ಯೋಜನೆಯಡಿ 2.61 ಟಿ.ಎಂ.ಸಿ. ನೀರು ಬಳಸಿ ಚಿಂಚೋಳಿ ತಾಲ್ಲೂಕಿನ ಒಟ್ಟು 9,713 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಕಾಲ ಕ್ರಮೇಣವಾಗಿ ಕೆಲವೊಂದು ಕಾಲುವೆ ಭಾಗಗಳು ಶಿಥಿಲಗೊಂಡಿದ್ದು, ರೂ.117.00 ಕೋಟಿ ಮೊತ್ತದ ಕೆಳದಂಡೆ ಮುಲ್ಲಾಮಾರಿ ಯೋಜನೆಯ ಕಾಲುವೆ ಜಾಲದ ಆಧುನೀಕರಣ ಕಾಮಗಾರಿಗಳನ್ನು 2018 ರಲ್ಲಿ ಕೈಗೆತ್ತಿಕೊಂಡಿದ್ದು, ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ.

3. **ಮುಲ್ಲಾಮಾರಿ ಮೇಲ್ದಂಡೆ ಯೋಜನೆ:-** ಮುಲ್ಲಾಮಾರಿ ಮೇಲ್ದಂಡೆ ಯೋಜನೆಯ ಅಣೆಕಟ್ಟನ್ನು ಮುಲ್ಲಾಮಾರಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದ್ದು, ಸದರಿ ಯೋಜನೆಯಿಂದ ಬೀದರ್ ಜಿಲ್ಲೆಯ ಹುಮ್ನಾಬಾದ್, ಬಸವಕಲ್ಯಾಣ, ಕಮಲಾಪುರ ಮತ್ತು ಕಲಬುರಗಿ ತಾಲ್ಲೂಕಿನ 3,279 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಯೋಜನೆಯ ಮುಖ್ಯ ಕಾಲುವೆಯು ಸುಮಾರು 30 ವರ್ಷಗಳ ಹಿಂದೆ ನಿರ್ಮಿಸಲಾಗಿದ್ದು, ಕಾಲ ಕ್ರಮೇಣವಾಗಿ ಕೆಲವೊಂದು ಕಾಲುವೆ ಭಾಗಗಳು ಶಿಥಿಲಗೊಂಡಿದ್ದು, ಸದರಿ ಯೋಜನೆಯಡಿ ಬರುವ ರೈತರಿಗೆ ಸಮರ್ಪಕವಾಗಿ ನೀರನ್ನು ಹರಿಸಲು ಕಷ್ಟಸಾಧ್ಯವಾಗಿರುವುದರಿಂದ ಮುಲ್ಲಾಮಾರಿ ಮೇಲ್ದಂಡೆ ಯೋಜನೆಯ ಕಾಲುವೆ ಜಾಲದ ಆಧುನೀಕರಣ ಕಾಮಗಾರಿಗಳನ್ನು ರೂ.74.10 ಕೋಟಿ ಮೊತ್ತದಲ್ಲಿ ಪೂರ್ಣಗೊಳಿಸಲಾಗಿರುತ್ತದೆ.

4. **ಅಮರ್ಜಾ ಯೋಜನೆ:-** ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ಸಂಗೋಳಗಿ ಗ್ರಾಮದ ಹತ್ತಿರ ಅಮರ್ಜಾ ನದಿಗೆ ಅಡ್ಡಲಾಗಿ ಆಣೆಕಟ್ಟು ನಿರ್ಮಿಸಿ 1.554 ಟಿ.ಎಂ.ಸಿ. ನೀರನ್ನು ಸಂಗ್ರಹಿಸಿ, ಆಳಂದ ಹಾಗೂ ಅಫಜಲಪೂರ ತಾಲೂಕಿನ ಗ್ರಾಮಗಳ 7,478 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿರುತ್ತದೆ.

5. **ಭೀಮಾ ಏತ ನೀರಾವರಿ ಯೋಜನೆ:** ಕಲಬುರಗಿ ಜಿಲ್ಲೆಯ ಅಫಜಲಪೂರ ತಾಲೂಕಿನ ಸೊನ್ನ ಗ್ರಾಮದ ಬಳಿ ಬ್ಯಾರೇಜ್ ನಿರ್ಮಿಸಿ, ಬಳುಂಡಗಿ ಮತ್ತು ಅಳಗಿ ಏತ ನೀರಾವರಿ ಮುಖಾಂತರ 6.00 ಟಿಎಂಸಿ ನೀರನ್ನು ಉಪಯೋಗಿಸಿ, ಅಫಜಲಪೂರ ತಾಲೂಕಿನ 23,008 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

6. **ಬೋರಿ ಕೆರೆ ತುಂಬಿಸುವ ಯೋಜನೆ:** ಕಲಬುರಗಿ ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಮಳೆಯ ಪ್ರಮಾಣ ಕ್ಷೀಣಿಸುತ್ತಿದ್ದು, ಇದರಿಂದಾಗಿ ಕೊಳವೆ ಬಾವಿಗಳಲ್ಲಿ, ತೆರೆದ ಬಾವಿಗಳಲ್ಲಿ ಹಾಗೂ ಕೆರೆಗಳಲ್ಲಿ ನೀರಿನ ಪ್ರಮಾಣವು ಕಡಿಮೆಯಾಗಿ, ಅಂತರ್ಜಲ ಮಟ್ಟವು ಕುಸಿದಿರುತ್ತದೆ. ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕು ಮತ್ತು ಅಫಜಲಪೂರ ತಾಲ್ಲೂಕಿನಲ್ಲಿ ಇದರ ತೀವ್ರತೆ ಹೆಚ್ಚಾಗಿದ್ದು, ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುತ್ತದೆ. ಈ ಹಿನ್ನಲೆಯಲ್ಲಿ ಭೀಮಾ ನದಿಯ ಉಪನದಿಯಾದ ಬೋರಿ ನದಿಯಿಂದ 1.00 ಟಿ.ಎಂ.ಸಿ. ನೀರನ್ನು ಎತ್ತಿ ಅಫಜಲಪೂರ ತಾಲ್ಲೂಕಿನ 17 ಕೆರೆಗಳು ಹಾಗೂ ಆಳಂದ ತಾಲ್ಲೂಕಿನ 3 ಕೆರೆಗಳಿಗೆ ಅವುಗಳ ಸಾಮರ್ಥ್ಯದ ಶೇ.50 ರಷ್ಟು ತುಂಬಿಸಿ ಹಾಗೂ ಅಮರ್ಜಾ ಜಲಾಶಯ ಒಳಹರಿವಿನ ಕೊರತೆಯನ್ನು 60% ರಷ್ಟು ಸರಿದೂಗಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯನ್ನು ರೂ. 450.00 ಕೋಟಿ ಮೊತ್ತದಲ್ಲಿ, 2019ನೇ ಸಾಲಿನಲ್ಲಿ ಕೈಗೆತ್ತಿಕೊಂಡಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಇದಲ್ಲದೇ, ಸದರಿ ಯೋಜನೆಯ ಮೂಲ ವಿನ್ಯಾಸದನ್ವಯ ಕೇವಲ ಪೈಪ್‌ಲೈನ್ ವಿಸ್ತರಿಸಿ ರೂ.49.50 ಕೋಟಿ ಮೊತ್ತದಲ್ಲಿ, ಹೆಚ್ಚುವರಿಯಾಗಿ ಆಳಂದ ತಾಲ್ಲೂಕಿನ 8 ಕೆರೆಗಳನ್ನು ತುಂಬಿಸಲು ಯೋಜಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

7. **ಯಡ್ರಳ್ಳಿ ಮತ್ತು ತೆರ್ನಳ್ಳಿ ಏತ ನೀರಾವರಿ ಯೋಜನೆ (ಕಾಗಿಣಾ)** : ಸದರಿ ಯೋಜನೆಯಡಿ ಭೀಮಾ ನದಿಯ ಉಪ ನದಿಯಾದ ಕಾಗಿಣಾ ನದಿಯಿಂದ ನೀರನ್ನು ಎತ್ತಿ ಕಲಬುರಗಿ ಜಿಲ್ಲೆಯ ಸೇಡಂ, ಚಿತ್ತಾಪುರ, ಚಿಂಚೋಳಿ ತಾಲ್ಲೂಕಿನ 4,150 ಹೇ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ರೂ.143.80 ಕೋಟಿ ಮೊತ್ತದ ಯೋಜನೆಗೆ ದಿನಾಂಕ:25.04.2022 ರಂದು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿದೆ.

8. **ಐನಾಪುರ ಏತ ನೀರಾವರಿ ಯೋಜನೆ:** ಕಲಬುರಗಿ ಜಿಲ್ಲೆ, ಚಿಂಚೋಳಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಐನಾಪೂರ ಮತ್ತು ಇತರೆ 17 ಗ್ರಾಮಗಳ ವ್ಯಾಪ್ತಿಯಲ್ಲಿ ಕಡಿಮೆ ಪ್ರಮಾಣದ ಮಳೆಯಾಗುತ್ತಿದ್ದು, ರೈತರನ್ನು ಆರ್ಥಿಕವಾಗಿ ಸದೃಢಗೊಳಿಸಲು ಕೆಳದಂಡೆ ಮುಲ್ಲಾಮಾರಿ ಯೋಜನೆಗೆ ಹಂಚಿಕೆಯಾದ 2.61 ಟಿಎಂಸಿ ನೀರಿನಲ್ಲಿ 2.034 ಟಿಎಂಸಿ ನೀರು ಬಳಕೆಯಾಗಿದ್ದು, ಉಳಿತಾಯವಾಗುವ 0.576 ಟಿಎಂಸಿ ನೀರಿನಲ್ಲಿ 0.34 ಟಿಎಂಸಿ ನೀರನ್ನು ಬಳಸಿಕೊಳ್ಳಲು ಐನಾಪುರ ಏತ ನೀರಾವರಿ ಯೋಜನೆಯನ್ನು ರೂಪಿಸಲಾಗಿರುತ್ತದೆ. ಸದರಿ ಯೋಜನೆಯನ್ನು ರೂ.204.10 ಕೋಟಿ ಮೊತ್ತದಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಯ ಟೆಂಡರ್‌ಗೆ ಅನುಮೋದನೆ ನೀಡಲಾಗಿದ್ದು, ಕಾಮಗಾರಿ ಪ್ರಾರಂಭಿಸಬೇಕಾಗಿದೆ.

ಭೀಮಾ ನದಿಯಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ನೀರನ್ನು ಬಳಸಿಕೊಳ್ಳಲು ನಿರ್ಬಂಧವಿದ್ದು, ಮಿತಿಗೊಳಿಸಿದ ಪ್ರಮಾಣದಲ್ಲಿ ಯೋಜನೆಗಳನ್ನು ರೂಪಿಸಲಾಗಿರುತ್ತದೆ. ಸಾಮಾನ್ಯ ವರ್ಷಗಳಲ್ಲಿ ನೀರಿನ ಕೊರತೆ ಇರುವುದಿಲ್ಲ. ಕೊರತೆಯಾದ ಜಲ ವರ್ಷಗಳಲ್ಲಿ ಕುಡಿಯುವ ಹಾಗೂ ಇತರೆ ಅಗತ್ಯತೆಗಳಿಗೆ ನೀರನ್ನು ಮಹಾರಾಷ್ಟ್ರ ರಾಜ್ಯದಿಂದ ಪಡೆಯಲು ಕ್ರಮವಹಿಸಲಾಗುತ್ತದೆ.

**ಸಂಖ್ಯೆ:ಜಸಂಇ 165 ಎಂಎಲ್ಎ 2024**

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿ**